sections of the people will be benefitted, the Government is not interested for the last 8 years?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಈ ಕೆರೆಯಿಂದ ಸದರಿ ಪ್ರದೇಶದ ಬಹುತೇಕ ಅನುಸೂಚಿತ ಜಾತಿ ಹಾಗೂ ಅದಿಮ ಜಾತಿಯವರಿಗೆ ಅನುಕೂಲವಾಗುತ್ತದೆನ್ನುವ ವಿಷಯವನ್ನು ಇನ್ವೆಸ್ಟಿಗೇಷನ್ ಆದ ನಂತರ ಹೇಳಬಹುದು. ಇನ್ನೂ ತನಿಖೆ ಪೂರ್ಣಗೊಂಡಿಲ್ಲ. ಪ್ರಿಲಿಮನರಿ ಇನ್ವೆಸ್ಟಿಗೇಷನ್‌ನಲ್ಲಿ ೧೨೭೦ ಎಕರೆ ಇರಿಗೇಟ್ ಆಗುತ್ತದೆಂದೂ ಹಾಗೂ ೩೮ ಲಕ್ಷ ರೂಪಾಯಿ ವೆಚ್ಚ ಆಗುತ್ತದೆಂದು ತೋರಿಸಲಾಗಿದೆ. ಇದಕ್ಕೆ ವಿಶ್ವಬ್ಯಾಂಕಿನ ಸಹಾಯ ಪಡೆಯುವ ಯೋಚನೆ ಇದೆ. ಫೀಸಿಬಲಿಟಿ ರಿಪೋರ್ಟ್ ಬಂದನಂತರ ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಪ್ರಭಾಕರ್‌ತೇಲ್ಕರ್.—ಮೈನರ್ ಇರಿಗೇಷನ್‌ನಲ್ಲಿ ಹಣ ಇದೆ ವಿಶ್ವಬ್ಯಾಂಕ್ ಸಹಾಯ ಏಕೆ ಬೇಕು? ೩೦ ಲಕ್ಷ ರೂಪಾಯಿ ಏನೂ ಹೆಚ್ಚಲ್ಲ. ಸರ್ಕಾರದವರೇ ಈ ಕೆರೆಯನ್ನು ತೆಗೆದುಕೊಂಡು ಪೂರೈಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಫೀಸಿಬಲಿಟಿ ರಿಪೋರ್ಟ್ ಬಂದ ನಂತರ ಆ ಯೋಜನೆ ಮಾಡುತ್ತೇವೆ.

Strentgh of Employees in Weights and Measures Department.

177. SRI S.S. ARAKERI (Balloli)—Will the Minister for Co-operation be pleased to state.—

(a) the total number of employees in the Department of Weights and Measures in all categories like Class I, Class II, Class III. and Class IV;

(b) the total number of SC & ST in all these cadres and their percentage;

(c) total number of appointments made since the last 5 years and category of posts filled in;

(d) the total number of SC & ST so appointed?

SRI H.C. SRIKANTAIAH (Minister for Co-operation)—

(a)

Class I	6
Class II	26
Class III	204
Class IV	96
total	332

(b)

	No.	*Percentage*
Class I	1	16.6
Class II	6	26.9
Class III	51	25.0
Class IV	38	39.6
Total	96	

(c)	Class I	Nil
	Class II	7
	Class III	17
	Class IV	6
	Total	30
(d)	Class I	Nil
	Class II	2
	Class III	6
	Class IV	5
	Total	13

ಶ್ರೀ ವಿ ಬಿ. ಭಾವಿ(ಮಾನ್ಯ ಶ್ರೀ ಎಸ್.ಎಸ್. ಅರಕೇರಿ ಅವರ ಪರವಾಗಿ).–– ಅಧ್ಯಕ್ಷರೆ, ನನಗೆ ಒದಗಿಸಿರುವ ಪ್ರಶ್ನೋತ್ತರ ಪಟ್ಟಿಯಲ್ಲಿ ''ಈ'' ಪ್ರಶ್ನೆಗೆ ಉತ್ತರವಾಗಿ ''ಒಂದನೇ ದರ್ಜೆ–ಒಬ್ಬರೂ ಇಲ್ಲ ಎರಡನೇ ದರ್ಜೆ–೨, ಮೂರನೇ ದರ್ಜೆ ೬, ನಾಲ್ಕನೇ ದರ್ಜೆ–೫'' ಎಂದು ಹೇಳಲಾಗಿದೆ. ಒಂದನೇ ದರ್ಜೆ ಎಂದರೆ, ಈ ದರ್ಜೆಯಲ್ಲಿ ಯಾವ ಯಾವ ಹುದ್ದೆಗಳು ಬರುತ್ತವೆ? ಕಂಟ್ರೋಲರ್ ಹುದ್ದೆ, ಡೆಪ್ಯೂಟಿ ಕಂಟ್ರೋಲರ್ ಹುದ್ದೆಯೇ ? ಇಲ್ಲಿ ಜಾರಿಗೆ ಉತ್ತರ ಕೊಡಲಾಗಿದೆ. ಯಾವ ದರ್ಜೆಗಳು ಎಂದು ಹೇಳ ಬೇಕು.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ (ಮಾನ್ಯ ಸಹಕಾರ ಮಂತ್ರಿಗಳ ಪರವಾಗಿ).––ಅಧ್ಯಕ್ಷರೇ, ಈ ಒಂದನೇ ದರ್ಜೆಯಲ್ಲಿ ೫ ಜನ ಡೆಪ್ಯೂಟಿ ಕಂಟ್ರೋಲರ್ಸ್ ಇದ್ದಾರೆ. ಇದರಲ್ಲಿ ಒಬ್ಬರೂ ಹರಿಜನಗಿರಿಜನರಿಲ್ಲ. ಈ ಐದು ಹುದ್ದೆಗಳನ್ನು ಪ್ರಮೋಷನ್ ಮೂಲಕ ಫಿಲಪ್ ಮಾಡಿದ್ದು ಉಳಿದಂತೆ ಇನ್ಸ್ ಪೆಕ್ಟರ್ ಆಫ್ ವೈಟ್ಸ್ ಆಂಡ್ ಮೆಷರ್ಸ್ ಹುದ್ದೆಗಳು ೫೨ ಇದ್ದು ಇದರಲ್ಲಿ ೯ ಜನ ಹರಿಜನರಿದ್ದಾರೆ. ಮೂರು ಜನ ಸೂಪರಿಂಟೆಂಡೆಂಟ್ಸ್‌ನಲ್ಲಿ ಒಬ್ಬರು ಹರಿಜನರಿದ್ದಾರೆ. ಉಳಿದಂತೆ ಸುಮಾರು ೪೩ಜನ ಮೊದಲ ದರ್ಜೆಯ ಗುಮಾಸ್ತರು ಹಾಗೂ ಶೀಫ್ರುಲಿಪಿಗಾರರಿದ್ದಾರೆ. ಹೀಗೆ ಮೊದಲ ದರ್ಜೆಯಲ್ಲಿನ ೫೫ ಹುದ್ದೆಗಳಲ್ಲಿ ಒಬ್ಬರೂ ಹರಿಜನಗಿರಿಜನರಿಲ್ಲ. ಮುಂದೆ ಸಾಧ್ಯವಾದಷ್ಟೂ ಪಟ್ಟಿಗೆ ರಿಸರ್ವೇಷನ್ ಪ್ರಕಾರ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ.

ಶ್ರೀ ವಿ.ಬಿ ಭಾವಿ.–ಮಾನ್ಯ ಮಂತ್ರಿಗಳ ಉತ್ತರ ನೋಡಿದರೆ ನನಗೆ ಸಂಶಯ ಬರುತ್ತದೆ. ೧೯೭೮ರಲ್ಲಿ ಪ್ರಮೋಷನ್ ರಿಸರ್ವೇಷನ್ ಎಂದು ಬಂತು. ೭೮ರಲ್ಲಿ ಪ್ರಮೋಷನ್ ರಿಸರ್ವೇಷನ್ ಸಲುವಾಗಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮ ಜಾತಿಯ ನೌಕರರಿಗೇನಾದರೂ ಹುದ್ದೆಗಳನ್ನು ಕಾಯ್ದಿರಿಸಲಾಯಿತೇ? ಆ ಕಾನೂನು ಪ್ರಕಾರ ಪ್ರಮೋಷನ್ ಕೊಟ್ಟಿದ್ದೀರಾ?

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.––ಅಧ್ಯಕ್ಷರೇ ಇಲ್ಲಿ ಸುಮಾರು ೧೭ ಅಪಾಯಿಂಟ್‌ಮೆಂಟ್ಸ್ ಮಾತ್ರ ೧೯೭೫ರಿಂದ ಆಗಿವೆ. ೧೯೭೫–೭೬ರಲ್ಲಿ ಕೇವಲ ೧ ನೇಮಕಾತಿ ಆಯಿತು. ೧೯೭೬ ೭೭ರಲ್ಲಿ ಮೂರು, ೧೯೭೭–೭೮ರಲ್ಲಿ ಕೇವಲ ಒಂದು. ಒಟ್ಟು ೧೭ ನೇಮಕಾತಿ, ಅದರಲ್ಲಿ ೪ ಹರಿಜನಗಿರಿಜನರ ನೇಮಕಾತಿಯಾಗಿದೆ. ೧೯೭೮ರಲ್ಲಿ ಯಾವ ಪ್ರಮೋಷನ್ನೂ ಆಗಿಲ್ಲ. ಆದರಲ್ಲಿ ರಿಸರ್ವೇಷನ್ ಆಫ್ ಪ್ರಮೋಷನ್ ಕೊಟ್ಟಿಲ್ಲ.

ಶ್ರೀ ವಿ.ಬಿ. ಭಾವಿ.––ಅಧ್ಯಕ್ಷರೇ ಪ್ರಮೋಷನ್ ರಿಸರ್ವೇಷನ್ ಪ್ರಕಾರ backlog to be filled up, ಪರಿಜನಗಿರಿಜನರಿಗೆ ರಿಸರ್ವೇಷನ್ ಪ್ರಕಾರ ಯಾವುದಾದರೂ ಹುದ್ದೆಗಳನ್ನು ಕಾಯ್ದಿರಿಸಿದ್ದೀರಾ? ಆ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ?

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.--ಈಗಾಗಲೇ ಹೇಳಿದಹಾಗೆ ಕೆಲವು ಕ್ಯಾಟಗರಿಯಲ್ಲಿ ರಿಸರ್ವೇಷನ್ ಕೊಟ್ಟಿಲ್ಲ. ಉದಾಹರಣೆಗೆ ೧೫ ಜನ ಪ್ರಥಮ ದರ್ಜೆ ಗುಮಾಸ್ತರ ಪೈಕಿ ಒಬ್ಬರು ಹರಿಜನರಿಗೆ ಕೊಡಲಾಗಿದೆ ಕ್ಲರ್ಕ್ ಕಮ್ ಟೈಪಿಸ್ಟ್ ಹುದ್ದೆಯಲ್ಲಿ ಮೂವರಲ್ಲಿ ಒಬ್ಬರು ಹರಿಜನರಿಗೆ ನೌಕರಿ ಕೊಡಲಾಗಿದೆ. ೧೭ ಜನ ಸೆಕೆಂಡ್ ಗ್ರೇಡ್ ಟೈಪಿಸ್ಟ್ ಹುದ್ದೆಗಳಲ್ಲಿ ಒಬ್ಬರೂ ಹರಿಜನಗಿರಿಜನರಿಲ್ಲ. ಏನು ಕೊರತೆ ಇದೆ ಆ ನೂನ್ಯತೆಯನ್ನು ಮುಂದೆ ಮಾಸಲಾತಿ ಪ್ರಕಾರ ಮಾಸಲಿಡಲಾಗುತ್ತದೆ.

ಶ್ರೀ ವಿ ಬಿ. ಭಾವಿ.--ಮೊದಲನೆಯ ದರ್ಜೆಯಲ್ಲಿ ಒಬ್ಬರೂ ಹರಿಜನಗಿರಿಜನರ ಪ್ರಾತಿನಿಧ್ಯ ಇಲ್ಲ. ಈ ಬಗ್ಗೆ ಯಾವ ರೀತಿಯ ನಿಯಮ ಅನುಸರಿಸುತ್ತೀರೆಂಬುದನ್ನು ಹೇಳಬೇಕು.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.--ಈ ಎಲ್ಲಾ ನೇಮಕಾತಿಗಳು ಹಿಂದೆ ಆಗಿದ್ದು. ಇನ್ನು ಮುಂದಕ್ಕೆ ಇದನ್ನು ಸರಿಪಡಿಸುತ್ತೇವೆಂದು ಆಗಲೇ ಹೇಳಿದ್ದೇನೆ.

ಶ್ರೀ ವಿ ಬಿ. ಭಾವಿ.--ಸರಿಪಡಿಸುತ್ತೇವೆಂದು ಹೇಳುತ್ತೀರಿ. ಹರಿಜನಗಿರಿಜನರಿಗೆ, ಹಿಂದುಳಿದ ಜಾತಿಯವರಿಗೆ...

ಅಧ್ಯಕ್ಷರು.--೧೯೭೮ರಿಂದೀಚೆಗೆ ಪ್ರಮೋಷನ್ ಕೊಟ್ಟಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದರು. ಇನ್ನು ಮುಂದೆ ಪ್ರಮೋಷನ್ ಕೊಡುವಾಗ ಮಾಸಲಾತಿಯನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದರಲ್ಲಾ?

ಶ್ರೀ ವಿ.ಬಿ. ಭಾವಿ.--ಈಗ ಯಾಕೆ ಮಾಡಿಲ್ಲ ಎಂದು ಕೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.--ಈಗ ಮೊದಲನೆದರ್ಜೆಯಲ್ಲಿರುವ ಹುದ್ದೆಗಳು ಐದು. ಡೆಪ್ಯುಟಿ ಕಂಟ್ರೋಲರ್‌ಗೆ ಕಾನೂನು ಪ್ರಕಾರ ಪ್ರಮೋಷನ್ ಕೊಡಲಾಗಿದೆ. ಯಾವ ಹುದ್ದೆ ಮುಂದೆ ಬಂದರೂ ಹರಿಜನಗಿರಿಜನರಿಗೆ ಪ್ರಾತಿನಿಧ್ಯ ಕೊಡುತ್ತೇವೆನ್ನುವ ವಿಷಯವನ್ನು ಸ್ಪಷ್ಟವಾಗಿ ಹೇಳುತ್ತೇನೆ,

Construction of Bridge near Bannadi in Udupi Division.

286. SRI ANANDA KUNDA HEGDE (Brahmavar)--Will the Minister for Public Works be pleased to state.--

(a) whether it is not a fact that a bridge near Bannadi at Udupi Public Works Division was construed during the year 1964;

(b) whether it is not a fact that lands were acquired for the construction of two and a half kilometer length road at Bannadi and Chitrapadi villages.

(c) whether it has come to the notice of Goverament that compensation was not paid to the farmers so far in this behalf;

(d) whether Government is prepared to take suitable action for early payment of compensation to the farmers?

SRI KAGODU THIMMAPPA (Minister for Public Works)--

(a) Construction work of the bridge was completed in 1970.

(b) Yes.

(c) Yes.

(d) Compensation will be paid as early aspossible.